# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ,
ನಂ.29 ವಿಜಯ ನಗರ 2ನೇ ಹಂತ,ಹಿನಕಲ್ -
ಮೈಸೂರು.
ದೂರವಾಣಿ ಕಛೇರಿ:0821-2343384
ಫ್ಯಾಕ್ಸ್ ಸಂ-0821-2417107
website : www.cescmysore.org
CIN: U40109KA2004SGC035177

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ-ವಿಭಾಗ,
ನುಗ್ಗೇಹಳ್ಳಿ-573131

ದೂರವಾಣಿ : 08176-233020
08176-233007
Email:aeenuggehalli07@rediffmail.com

ಸಂಖ್ಯೆ:ಸಕಾನಿಇಂ(ವಿ)/ಸಇಂ(ತಾಂ)/ನುಹ/2017-18/2053-63 ದಿನಾಂಕ: 25-1-18

## ಜನಸಂಪರ್ಕ ಸಭಾ ನಡಾವಳಿ

ದಿನಾಂಕ : 23-01-2018 ರಂದು ಬೆಳಗ್ಗೆ 11:00 ಗಂಟೆಗೆ ನುಗ್ಗೇಹಳ್ಳಿ ಉಪ ವಿಭಾಗದ ಕಛೇರಿ ಆವರಣದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ),ನುಗ್ಗೇಹಳ್ಳಿ ರವರ ಅಧ್ಯಕ್ಷತೆಯಲ್ಲಿ ನಡೆದ " ಜನ ಸಂಪರ್ಕ ಸಭೆ " ಯ ನಡಾವಳಿಗಳು.

**ಹಾಜರಿದ್ದ ಅಧಿಕಾರಿ/ನೌಕರರು**

ಶ್ರೀಯುತರುಗಳಾದ :-

1) ಶ್ರೀ ಮಲ್ಲಪ್ಪಾಚಾರ್ — ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್,ನುಗ್ಗೇಹಳ್ಳಿ
2) ಶ್ರೀ ರಾಮಚಂದ್ರ.ಕೆ.ಎನ್ — ಕಿರಿಯ ಇಂಜಿನಿಯರ್(ವಿ), ತಾಂತ್ರಿಕ ಶಾಖೆ, ನುಗ್ಗೇಹಳ್ಳಿ
3) ಶ್ರೀ ರಾಘವೇಂದ್ರ.ಕೆ — ಸಹಾಯಕ ಇಂಜಿನಿಯರ್(ವಿ), ನುಗ್ಗೇಹಳ್ಳಿ ಶಾಖೆ.
4) ಶ್ರೀ ಲಕ್ಷ್ಮಣಗೌಡ — ಉಸ್ತುವಾರಿ ಶಾಖಾಧಿಕಾರಿ , ಬಾಗೂರು ಶಾಖೆ.
5) ಶ್ರೀ ಹೆಚ್.ಎಸ್.ಪ್ರದೀಪ್ — ಕಿರಿಯ ಇಂಜಿನಿಯರ್(ವಿ), ಕೆಂಬಾಳು ಶಾಖೆ.
6) ಶ್ರೀ ಹೆಚ್.ಜಿ.ಶಿವಕುಮಾರ್ — ಕಿರಿಯ ಇಂಜಿನಿಯರ್(ವಿ), ಹಿರೀಸಾವೆ ಶಾಖೆ.
7) ಶ್ರೀ ಲಕ್ಷ್ಮಯ್ಯ.ಎಲ್ — ಕಿರಿಯ ಇಂಜಿನಿಯರ್(ವಿ), ದಿಡಗ ಶಾಖೆ.
8) ಶ್ರೀ ಉಮಾಶಂಕರ.ಸಿ.ಪಿ — ಉಸ್ತುವಾರಿ ಹಿರಿಯ ಸಹಾಯಕರು, ನುಗ್ಗೇಹಳ್ಳಿ ಉಪ ವಿಭಾಗ.
9) ಶ್ರೀ ಮಧು — ಉಸ್ತುವಾರಿ ಹಿರಿಯ ಸಹಾಯಕರು, ಹಿರೀಸಾವೆ ಶಾಖೆ.

ಹಾಜರಿದ್ದ ಎಲ್ಲಾ ಗ್ರಾಹಕರನ್ನು/ಅಧಿಕಾರಿಗಳನ್ನು ಹಾಗೂ ನೌಕರರನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು. ಸಭೆಯಲ್ಲಿ ಈ ಕೆಳಕಂಡಂತೆ ಮನವಿಗಳನ್ನು ಸ್ವೀಕರಿಸಲಾಯಿತು.

| ಕ್ರಸ | ಗ್ರಾಹಕರ ಹೆಸರು ಮತ್ತು ವಿಳಾಸ | ವಿಷಯ | ನಡಾವಳಿಗಳು |
|---|---|---|---|
| 1 | ಶ್ರೀ ಎನ್.ಜಿ.ಗುಂಡಪ್ಪ,ಜಿ.ಎನ್.ಕೊಪ್ಪಲು, ನುಗ್ಗೇಹಳ್ಳಿ ಶಾಖೆ | ಜಿ.ಎನ್.ಕೊಪ್ಪಲು ಗ್ರಾಮದಲ್ಲಿ ವಿಫಲವಾಗಿರುವ 25 ಕೆವಿಎ ಪರಿವರ್ತಕವನ್ನು ಬದಲಾಯಿಸಲು ಕೋರಿರುತ್ತಾರೆ. | ನುಗ್ಗೇಹಳ್ಳಿ ಶಾಖಾಧಿಕಾರಿರವರಿಗೆ ಕೂಡಲೇ ಅಂದಾಜು ಪಟ್ಟಿ ತಯಾರಿಸಿ ಮೂರು ದಿವಸಗಳೊಳಗೆ ಪರಿವರ್ತಕವನ್ನು ಬದಲಾಯಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು. |
| 2 | ಶ್ರೀ ವಿಜಯಕುಮಾರ್,ಮಾದಲಗೆರೆ ನುಗ್ಗೇಹಳ್ಳಿ ಶಾಖೆ | ಮಾದಲಗೆರೆ ಗ್ರಾಮದಲ್ಲಿ 25ಕೆವಿಎ ಪರಿವರ್ತಕವು ವಿಫಲವಾಗಿದ್ದು ಹೆಚ್ಚಿನ ಒತ್ತಡ ಇರುವುದರಿಂದ 63 ಕೆವಿಎ ಪರಿವರ್ತಕವನ್ನು ಅಳವಡಿಸಲು ಕೋರಿರುತ್ತಾರೆ. | ನುಗ್ಗೇಹಳ್ಳಿ ಶಾಖಾಧಿಕಾರಿಯವರು ಸ್ಥಳ ಪರಿಶೀಲಿಸಿ 25 ಕೆವಿಎ ಪರಿವರ್ತಕದಿಂದ 63 ಕೆವಿಎ ಪರಿವರ್ತಕವನ್ನು ಬದಲಾಯಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ಮುಂದಿನ ಕ್ರಮಕ್ಕಾಗಿ ವಿಭಾಗಿಯ ಕಛೇರಿಗೆ ಸಲ್ಲಿಸಲಾಗಿದೆಯೆಂದು ತಿಳಿಸಿರುತ್ತಾರೆ. |
| 3 | ಶ್ರೀ ಬೋರೆಗೌಡ,ಕಗ್ಗೆರೆ, ನುಗ್ಗೇಹಳ್ಳಿ ಶಾಖೆ | ಕಗ್ಗೆರೆ ಗ್ರಾಮದಲ್ಲಿ 100ಕೆವಿಎ ಪರಿವರ್ತಕವು ವಿಫಲವಾಗಿದ್ದು ಶೀಘ್ರದಲ್ಲಿ ಬದಲಾಯಿಸಲು ಕೋರಿರುತ್ತಾರೆ. | ನುಗ್ಗೇಹಳ್ಳಿ ಶಾಖಾಧಿಕಾರಿರವರಿಗೆ ಕೂಡಲೇ ಅಂದಾಜು ಪಟ್ಟಿ ತಯಾರಿಸಿ ಮೂರು ದಿವಸಗಳೊಳಗೆ ಪರಿವರ್ತಕವನ್ನು ಬದಲಾಯಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು. |

| | | | |
|---|---|---|---|
| 4 | ಶ್ರೀ ಪುಟ್ಟೇಗೌಡ ಬಿನ್ ಹನುಮೇಗೌಡ, ನೆಟ್ಟೆಕೆರೆ, ನುಗ್ಗೇಹಳ್ಳಿ ಶಾಖೆ | ನೆಟ್ಟೆಕೆರೆ ಗ್ರಾಮದಲ್ಲಿ ಅಕ್ರಮ ಸಕ್ರಮದ ಯೋಜನೆಯಲ್ಲಿ ನೀರಾವರಿ ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಪಡೆದಿದ್ದು (NTKIP-32659) ಪಕ್ಕದ ಜಮೀನಿನವರು ವಿದ್ಯುತ್ ಸಂಪರ್ಕ ಕಡಿತಗೊಳಿಸಿರುತ್ತಾರೆಂದು ಕೋರಿರುತ್ತಾರೆ ... | ನುಗ್ಗೇಹಳ್ಳಿ ಶಾಖಾಧಿಕಾರಿಯವರಿಗೆ ಕೂಡಲೇ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು. |
| 5 | ಶ್ರೀ ಬಿ.ಎಸ್.ಗೋಪಾಲೇಗೌಡ ಬಿನ್ ಶಿವನಂಜೇಗೌಡ, ಬೋರೇಗೌಡನ ಕೊಪ್ಪಲು, ಹಿರೀಸಾವೆ ಶಾಖೆ | ಬೋರೇಗೌಡನ ಕೊಪ್ಪಲು, ಗ್ರಾಮದಲ್ಲಿ ಕೋಳಿ ಫಾರಂಗೆ ಐಪಿ ಫೀಡರ್‌ನಿಂದ ವಿದ್ಯುತ್ ಸಂಪರ್ಕ ಪಡೆದಿದ್ದು (BRP-25748) ಪಕ್ಕದಲ್ಲಿರುವ ನಿರಂತರ ಯೋಜನೆಯಡಿಯಲ್ಲಿರು ಕಂಬದಿಂದ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿರುತ್ತಾರೆ | ಹಿರೀಸಾವೆ ಶಾಖಾಧಿಕಾರಿಯವರಿಗೆ ಕೂಡಲೇ ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ನೀಡಲು ಸೂಚಿಸಲಾಯಿತು. |
| 6 | ಶ್ರೀ ಕಪನಿಗೌಡ ಮತ್ತು ಇತರೆ ಏಳು ಗ್ರಾಹಕರು,ಕೊತ್ತನಹಳ್ಳಿ | ಕೊತ್ತನಹಳ್ಳಿ ಗ್ರಾಮದಲ್ಲಿ 63 ಕೆವಿಎ ಪರಿವರ್ತಕವು ವಿಫಲವಾಗಿದ್ದು ಬದಲಾಯಿಸಲು ಕೋರಿರುತ್ತಾರೆ. | ಹಿರೀಸಾವೆ ಶಾಖಾಧಿಕಾರಿರವರಿಗೆ ಕೂಡಲೇ ಅಂದಾಜು ಪಟ್ಟಿ ತಯಾರಿಸಿ ಮೂರು ದಿವಸಗಳೊಳಗೆ ಪರಿವರ್ತಕವನ್ನು ಬದಲಾಯಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು |
| 7 | ಶ್ರೀ ಸಿ.ಹೆಚ್.ರಂಗಸ್ವಾಮಿ ಬಿನ್ ಅಂಜನೇಯ,ಚವ್ವೇನಹಳ್ಳಿ | ಚವ್ವೇನಹಳ್ಳಿ ಗ್ರಾಮದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆಯಲು ಅರ್ಜಿ ನೊಂದಾಯಿಸಿದ್ದು ಶೀಘ್ರದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿರುತ್ತಾರೆ. | ಕೆಂಬಾಳು ಶಾಖಾಧಿಕಾರಿರವರಿಗೆ ಕೂಡಲೇ ಸ್ಥಳ ಪರಿಶೀಲಿಸಿ ವರದಿಯನ್ನು ನೀಡಲು ಸೂಚಿಸಲಾಯಿತು |
| 8 | ಡಿಟಿಎಲ್‌ಎಂಎಸ್ ಮತ್ತು ಬಿಸಿಐಟಿ ಸೂಪರ್‌ವೈಸರ್‌ಗಳು,ಮೈಸೂರು, | ಡಿಟಿಎಲ್‌ಎಂಎಸ್ ಮತ್ತು ಬಿಸಿಐಟಿ ಸೂಪರ್‌ವೈಸರ್‌ಗಳು ಪರಿವರ್ತಕಗಳ ಕೇಂದ್ರಗಳ ಮಾಹಿತಿಗಳನ್ನು ತಿಳಿಸಲು ಕೋರಿರುತ್ತಾರೆ. | ಸಭೆಯಲ್ಲಿ ಹಾಜರಿದ್ದ ಶಾಖಾಧಿಕಾರಿಗಳು ನುಗ್ಗೇಹಳ್ಳಿ,ಕೆಂಭಾಳು,ಹಿರೀಸಾವೆ,ದಿಡಗ,ಬಾಗೂರುರವರಿಗೆ ಡಿಟಿಎಲ್‌ಎಂಎಸ್ ಮತ್ತು ಬಿಸಿಐಟಿ ಸೂಪರ್‌ವೈಸರ್‌ಗಳ ಜೊತೆಗೂಡಿ ಕಾಮಗಾರಿಯನ್ನು ಪೂರ್ಣಗೊಳಿಸಿ ವರದಿಯನ್ನು ನೀಡಲು ಸೂಚಿಸಲಾಯಿತು. |

ಈ ಸಭೆಯನ್ನು ಬೆಳಿಗ್ಗೆ 11:00 ಗಂಟೆಗೆ ಪ್ರಾರಂಬಿಸಿ ಮದ್ಯಾಹ್ನ 02:30 ಗಂಟೆಯವರೆಗೆ ನಡೆಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಇಂತಿ ವಿಶ್ವಾಸಿ

20/11/18

ಸಹಾಯಕ ಕಾರ್ಯಪಾಲಕ ಅಭಿಯಂತರರು(ವಿ)
ಚಾವಿಸನಿನಿ., ಕಾ ಮತ್ತು ಪಾ ಉಪವಿಭಾಗ,
ನುಗ್ಗೇಹಳ್ಳಿ.

ಪ್ರತಿಯನ್ನು:

1) ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ ಕಛೇರಿ, ಚಾವಿಸನಿನಿ, ಹಾಸನರವರ ಅವಗಾಹನೆಗಾಗಿ.
2) ಕಾರ್ಯಪಾಲಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ ಕಛೇರಿ, ಸೆಸ್ಕ್, ಚನ್ನರಾಯಪಟ್ಟಣರವರ ಅವಗಾಹನೆಗಾಗಿ.
3) ಶಾಖಾಧಿಕಾರಿಗಳು ಚಾವಿಸನಿನಿ, ನುಗ್ಗೇಹಳ್ಳಿ ,ಕೆಂಬಾಳು,ಬಾಗೂರು,ಹಿರೀಸಾವೆ,ದಿಡಗ ರವರ ಮಾಹಿತಿಗಾಗಿ.
4) ಕಛೇರಿ ಕಡತಕ್ಕೆ.